







## ದೇವ ಕಣಗಿಲೆ

ಅಪೋಸಯ ನೇಸಿಯೇ ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಈ ಹೂವನ್ನು ಕಣಗಿಲೆ, ಅರಳೀಪುಷ್ಪ, ದೇವ ಕಣಗಿಲೆ ಎಂದೂ ಕರೆಯುತ್ತಾರೆ. ಇದರ ಗಿಡಗಳು ತೊರೆ, ಹಳ್ಳ ಹಾಗೂ ನದಿಯ ದಡಗಳಲ್ಲಿ ಬೆಳೆಯುತ್ತವೆ. ಗುಲಾಬಿ, ಹಳದಿ, ಬಿಳಿ ಬಣ್ಣಗಳಲ್ಲಿ ಅರಳುವ ಈ ಹೂಗಳ ಸೌಂದರ್ಯ ಅತ್ಯದ್ಭುತವಾದದ್ದು. ಇದನ್ನು ಶಿವನ ದೇವಾಲಯಗಳಲ್ಲಿ ಹೆಚ್ಚಾಗಿ ಕಾಣಬಹುದು. ಈ ಹೂವು ಬೇಗನೆ ಬಾಡುವುದೂ ಇಲ್ಲ. ಒಂದು ವಿಶೇಷ ಪರಿಮಳವನ್ನೂ ಹೊಂದಿದೆ. ಇತ್ತೀಚೆಗೆ ಈ ಹೂವುಗಳಲ್ಲಿ ವಿಷದ ಅಂಶ ಇರುವುದೆಂಬ ವದಂತಿ ಹರಡಿ, ಹೂವನ್ನು ಬಳಸುವ ಹಾಗೂ ಗಿಡವನ್ನು ಬೆಳೆಸುವ ವಿಷಯದಲ್ಲಿ ಕೇರಳ ಸರ್ಕಾರ ನಿಷೇಧ ಹೇರಿದೆಯೆಂಬ ಸುದ್ದಿ ಹರಡಿದೆ. ಏನೇ ಆಗಲಿ ಅದರ ಚೆಲುವನ್ನು ಕಂಡು ಆನಂದಿಸುವಲ್ಲಿ ಯಾರೂ ನಿಷೇಧ ಹೇರುವುದಿಲ್ಲ ಅಲ್ಲವೇ.

**–ಎನ್. ಕೃಷ್ಣಮೂರ್ತಿ ರಾವ್, ಬೆಂಗಳೂರು**

## ನಾನು ಹೂವಲ್ಲ ಎಲೆ

ನಾನು ಬಯಲು ಸೀಮೆಯವನು. ಈ ಚಿತ್ರದಲ್ಲಿ ಕಾಣುತ್ತಿರುವ ಸಸ್ಯವನ್ನು ನಾನು ಈ ಮೊದಲು ಎಲ್ಲಿಯೂ ನೋಡಿರಲಿಲ್ಲ. ಮಂಗಳೂರಿನಲ್ಲಿರುವ ನನ್ನ ಅಕ್ಕನ ಮನೆಗೆ ಈಚೆಗೆ ಹೋಗಿದ್ದಾಗ ಈ ಗಿಡವನ್ನು ನೋಡಿ ಆಶ್ಚರ್ಯವಾಯಿತು. ಅಲ್ಲಿನವರ ಮಾಹಿತಿಯಂತೆ ಇದು 'ಮುಸ್ಸೆಂಡಾ ಫಿಲಿಪಿಕಾ'. ರೂಬಿಯೇಸಿ ಕುಟುಂಬಕ್ಕೆ ಸೇರಿದ ಸಸ್ಯ. ಇದನ್ನು ಸಾಮಾನ್ಯವಾಗಿ 'ಬ್ಯಾಂಕಾಕ್ ರೋಸ್' ಎಂದು ಕರೆಯುತ್ತಾರೆ. ಇದರ ಹೂಗಳು ತುಂಬಾ ಚಿಕ್ಕದಾಗಿದ್ದು, ಈ ಗಿಡದಲ್ಲಿ ಹೂವಿಗಿಂತ ಅದರ ಸುತ್ತಲಿರುವ ಎಲೆಗಳೇ ಹೆಚ್ಚು ಆಕರ್ಷಕವಾಗಿದ್ದು, ಎಲ್ಲರ ಗಮನಸೆಳೆಯುತ್ತವೆ.

ಗಿಡದ ತುಂಬಾ ಇರುವ ಎಲೆಗಳು ಸಾಮಾನ್ಯ ಹಸಿರು ಬಣ್ಣದಿಂದ ಕೂಡಿದ್ದರೆ, ಚಿಗುರಿನಲ್ಲಿರುವ ಎಲೆಗಳು ಮಾತ್ರ ಗುಲಾಬಿ, ಕೆಂಪು, ಬಿಳಿ ಹೀಗೆ ಒಂದು ಗಿಡದಲ್ಲಿ ನೋಡುಗರ ಕಣ್ಮನ ಸೆಳೆಯುತ್ತವೆ. ಈ ಸಸ್ಯವನ್ನು ಉದ್ಯಾನವನಗಳಲ್ಲಿ, ರಸ್ತೆ ಬದಿಯಲ್ಲಿ, ಮನೆಯ ಕಾಂಪೌಂಡಿನ ಪಕ್ಕದಲ್ಲಿ, ಸಾರ್ವಜನಿಕ ತೋಟಗಳಲ್ಲಿ ಆಕರ್ಷಣೆಗೋಸ್ಕರ ಬೆಳೆಸಲಾಗುತ್ತದೆ. ಈ ಸಸ್ಯವನ್ನು ಪ್ರಪಂಚದಾದ್ಯಂತ ಉಷ್ಣವಲಯ ಪ್ರದೇಶಗಳಲ್ಲಿ ಹೆಚ್ಚಾಗಿ ಅಲಂಕಾರಕ್ಕೆಂದು ಬೆಳೆಸಲಾಗುತ್ತದೆ. ಮುಸ್ಸೆಂಡಾ ಫಿಲಿಪಿಕಾವು ಸುಂದರ ವಿಶಿಷ್ಟವಾದ ಹೂವುಗಳಿಂದ ಮತ್ತು ಬಣ್ಣದ ಎಲೆಗಳಿಂದಾಗಿ ಉದ್ಯಾನಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

**–ಹನುಮಂತ ಎಸ್.ಕೆ., ರಾಯಚೂರು**

